ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ

# ಪಶುವೈದ್ಯಕೀಯ ಮಹಾವಿದ್ಯಾಲಯ

ನಂದಿನಗರ, ಅ. ಪೆ. ಸಂಖ್ಯೆ 6, ಬೀದರ – 585 401 (ಕರ್ನಾಟಕ)

ದೂರವಾಣಿ : 08482 – 245106
ಇ-ಮೇಲ್ : deanvcb@gmail.com

ಡೀನ್‌ರವರ ಕಾರ್ಯಾಲಯ

ಸಂಖ್ಯೆ ಡೀನ್/ಪವೈಮ(ಬೀ)/2020-21 ದಿನಾಂಕ 01-03-2021

## ಪ್ರಕಟಣೆ

**ವಿಷಯ :** ಗುತ್ತಿಗೆ ಆಧಾರದ ಮೇಲೆ ಭೋಧಕರನ್ನು ನೇಮಕಾತಿ ಮಾಡುವ ಕುರಿತು

**ಉಲ್ಲೇಖ:** 1) ಕುಲಸಚಿವರ ಆದೇಶ ಸಂಖ್ಯೆ R/VCB-CT/2020-21/1140-A Dtd: 22-02-2021
2) ಕುಲಸಚಿವರ ಆದೇಶ ಸಂಖ್ಯೆ R/93BOM/AP(CT)/Honorarium/20-21/965 Dtd 17-07-20

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ, ಬೀದರನ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ಭೋಧಕ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ 179 ದಿನಗಳಿಗೆ ಮೀರದಂತೆ ನೇಮಕಾತಿ ಮಾಡಿಕೊಳ್ಳಲು ಉದ್ದೇಶಿಸಲಾಗಿದೆ. ಅರ್ಹ ಅಭ್ಯಾರ್ಥಿಗಳು ಸಂಬಂಧಪಟ್ಟ ವಿಷಯದಲ್ಲಿ ಎಮ್‌ಎಸ್ಸಿ/ಎಮ್‌ವಿಎಸ್‌ಸಿ/ಪಿಎಚ್‌ಡಿ ಹೊಂದಿರಬೇಕು. ದಿನಾಂಕ 05-03-2021 ರಂದು ಮುಂಜಾನೆ 10.00 ಗಂಟೆಗೆ ಡೀನ್‌ರವರ ಕಾರ್ಯಾಲಯದಲ್ಲಿ ನಡೆಯುವ ಸಂದರ್ಶನಕ್ಕೆ ಸ್ವವಿವರದೊಂದಿಗೆ (ಬಯೋಡೆಟಾ) ಹಾಜರಾಗಲು ಮಾಹಿತಿಸಲಾಗಿದೆ.

| ಕ್ರ ಸ | ಹುದ್ದೆಯ ಹೆಸರು | ವಿಷಯ/ವಿಭಾಗದ ಹೆಸರು | ಹುದ್ದೆಗಳ ಸಂಖ್ಯೆ |
|---|---|---|---|
| 1 | ಸಹಾಯಕ ಪ್ರಾಧ್ಯಾಪಕರು ದೈಹಿಕ ಶಿಕ್ಷಣ ವಿಭಾಗ | ದೈಹಿಕ ಶಿಕ್ಷಣ (Physical Education) | 01 |
| 2 | ಫಾರ್ಮ ಮ್ಯಾನೇಜರ್/ ಸಹಾಯಕ ಪ್ರಾಧ್ಯಾಪಕರು, ಜಾನುವಾರು ಸಾಕಾಣಿಕ ಸಂಕೀರ್ಣ | ಜಾನುವಾರು ಸಾಕಾಣಿಕ ಸಂಕೀರ್ಣ (Agronomy) | 01 |
| 3 | ಸಹಾಯಕ ಪ್ರಾಧ್ಯಾಪಕರು ಪಶುವೈದ್ಯಕೀಯ ಚಿಕಿತ್ಸಾ ಸಂಕೀರ್ಣ | ಪಶುವೈದ್ಯಕೀಯ ಶಸ್ತ್ರಚಿಕಿತ್ಸಾಶಾಸ್ತ್ರ ಮತ್ತು ಕ್ಷ ಕಿರಣ (VSR) | 01 |

**<u>ಷರತ್ತು ಮತ್ತು ನಿಭಂಧನೆಗಳು:</u>**

1. <u>ದಿನಾಂಕ 05-03-2021 ರಂದು ಬೆಳಗ್ಗೆ 10.00 ಗಂಟೆಗೆ</u> ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರನಲ್ಲಿ ಸ್ವವಿವರದೊಂದಿಗೆ (ಬಯೋಡೆಟಾ) ಮೂಲ ದಾಖಲೆಗಳ ಸಹಿತ ಸಂದರ್ಶನಕ್ಕೆ ಹಾಜರಾಗುವುದು
2. ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿಯೆ ಸಂದರ್ಶನಕ್ಕೆ ಹಾಜರಾಗತಕ್ಕದ್ದು ಮತ್ತು ಪ್ರವಾಸ ಭತ್ಯೆ/ಇತರೆ ಯಾವುದೇ ಭತ್ಯೆಗೆ ಅರ್ಹರಿರುವುದಿಲ್ಲ
3. ಮೇಲೆ ತಿಳಿಸಲಾದ ಹುದ್ದೆಗಳು ಸಂಪೂರ್ಣವಾಗಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಆಗಿದ್ದು (179 ದಿನಗಳಿಗೆ ಮೀರದಂತೆ) ಈ ಗುತ್ತಿಗೆ ನೇಮಕಾತಿಗೆ ಖಾಯಂ ಮತ್ತು ಹಿರಿತನ ಅರ್ಹತೆಗೆ ಪರಿಗಣಿಸಲಾಗುವುದಿಲ್ಲ, ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿರುವ ಅಭ್ಯಾರ್ಥಿಗಳಿಗೆ ಮುಂಚಿತವಾಗಿ ಯಾವುದೇ ಮಾಹಿತಿ ನೀಡದೆ ಗುತ್ತಿಗೆ ಅವಧಿಯನ್ನು ರದ್ದು ಪಡಿಸುವ ಮತ್ತು ತೆಗೆದುಹಾಕುವ ಹಕ್ಕನ್ನು ಡೀನ್‌ರವರು ಹೊಂದಿರುತ್ತಾರೆ.
4. ಪಿಎಚ್‌ಡಿ ಹೊಂದಿರುವ ಅಭ್ಯರ್ಥಿಗಳಿಗೆ <u>ರೂ. 38,000/-</u> ಪ್ರತಿ ತಿಂಗಳು ಹಾಗೂ ಎಂವ್ಹಿಎಸ್‌ಸಿ ಪಡೆದಿರುವ ಅಭ್ಯರ್ಥಿಗಳಿಗೆ <u>ರೂ. 35,000/-</u> ಪ್ರತಿ ತಿಂಗಳಂತೆ ಸಂಭಾವನೆ/ವೇತನ/ಸಂಚಿತ ಗೌರವಧ ನೀಡಲಾಗುವುದು.
5. ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿದ ಆಭ್ಯರ್ಥಿಗಳನ್ನು ಅವಶ್ಯಕತೆಗನುಗುಣವಾಗಿ ಡೀನ್‌ರವರು ನಿಗದಿಪಡಿಸಿದ ಕೆಲಸದ ಮೇಲೆ ನಿಯೋಜಿಸಲು ಸಂಪೂರ್ಣ ಹಕ್ಕನ್ನು ಹೊಂದಿರುತ್ತಾರೆ.
6. ಕರ್ನಾಟಕ ರಾಜ್ಯದ ಮೂಲ ನಿವಾಸಿಗಳು ಮತ್ತು ಬಳಕೆ/ವ್ಯವಹಾರಿಕ ಕನ್ನಡದ ಜ್ಞಾನ ಹೊಂದಿರುವ ಅಭ್ಯಾರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು
7. ಅಭ್ಯರ್ಥಿಗಳು ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು

ಡೀನ್(ಪವೈ)

ಡೀನ್(ಪವೈ) 01/03/2021.
ಪಶುವೈದ್ಯಕೀಯ ಮಹಾವಿದ್ಯಾಲಯ
ನಂದಿನಗರ, ಬೀದರ

**<u>ಪ್ರ.ಆ:</u>** ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು/ಹಾಸನ/ಶಿವಮೊಗ್ಗ ಮಾಹಿತಿಗಾಗಿ ಸಲ್ಲಿಸಲಾಗಿದೆ.
**<u>ಪ್ರತಿ:</u>** ಮೇಲಿನ ವಿಭಾಗದ ಮುಖ್ಯಸ್ಥರಿಗೆ ಮಾಹಿತಿಗಾಗಿ ಮತ್ತು ಸದರಿ ವಿಷಯವನ್ನು ಪ್ರಚುರ ಪಡಿಸಲು ಕೋರಿದೆ